ಎಂ ವಿ ಸಿ ನಂ.80/2025 ಪಿ ಡಬ್ಲ್ಯೂ 1

**ಈ ಸಾಕ್ಷಿಯನ್ನು ದಿನಾಂಕಃ 18.06.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 2ನೇ ಎದುರುದಾರರ ಪರ ವಕೀಲರಿಂದ**

ಅಪಘಾತದ ದಿನ ನಾನು ಶ್ಯಾಗ್ಯ –ಹನೂರುದಿಂದ ಬೆಂಗಳೂರಿಗೆ ನನ್ನ ಗೆಳೆಯರನ್ನು ಭೇಟಿ ಮಾಡಲು ಹೊಂಡಾ ಆ್ಯಕ್ಟಿವಾ ಸ್ಕೂಟರ್ ನಲ್ಲಿ ಹೋಗುತ್ತಿದ್ದೆನು. ನಾನು ಹೊಂಡಾ ಆ್ಯಕ್ಟಿವಾ ಸ್ಕೂಟರ್ ನ್ನು ಕೊಳ್ಳೇಗಾಲದಲ್ಲಿ ಪಾರ್ಕ್ ಮಾಡಿ ಬಸ್ಸಿನಲ್ಲಿ ಹೋಗುತ್ತಿರಲಿಲ್ಲ, ನಾನು ಅಲ್ಲಿಂದ ಸ್ಕೂಟರ್ನಲ್ಲಿ ಬೆಂಗಳೂರಿಗೆ ಹೋಗುತ್ತಿದ್ದೆ. ನಾನು ಬೆಳಿಗ್ಗೆ 7 ಗಂಟೆಗೆ ಹನೂರಿನಿಂದ ಹೊಂಡಾ ಆ್ಯಕ್ಟಿವಾ ಸ್ಕೂಟರ್ ನಿಂದ ಹೊರಟಿದ್ದು ಹನೂರಿನ ಬಳಿ ಬೆಳಿಗ್ಗೆ 7.30ಕ್ಕೆ ಅಪಘಾತ ಆಗಿರುತ್ತದೆ. ಶ್ಯಾಗ್ಯ ಬಂಡಳ್ಳಿ ರಸ್ತೆಯಲ್ಲಿ ಹೊಂಡಗಳಿವೆ ಎಂದರೆ ಸರಿ. ಚಿಂಚಳ್ಳಿ ಮಾರ್ಗವಾಗಿ ಆರ್ ಎಸ್. ದೊಡ್ಡಿ ಬಳಿ ಹನೂರು ರಸ್ತೆಯನ್ನು ಸೇರಿರುತ್ತೇನೆ. ಚಿಂಚಳ್ಳಿ ರಸ್ತೆ ಮಣ್ಣಿನ ರಸ್ತೆ ಎಂದರೆ ಸರಿ. ನಾನೇ ಹೊಂಡಾ ಆ್ಯಕ್ಟಿವಾ ಸ್ಕೂಟರ್ ಓಡಿಸಿಕೊಂಡು ಹೋಗುತ್ತಿದ್ದೆ. ನನ್ನ ಬಳಿ ವಾಹನ ಚಾಲನಾ ಪರವಾನಗಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಒಬ್ಬನೇ ಸ್ಕೂಟರನ್ನು ಚಲಾಯಿಸಿಕೊಂಡು ಹೋಗುತ್ತಿದ್ದೆ. ಅಪಘಾತ ಆದ ನಂತರ ನನ್ನನ್ನು ಹೋಲಿಕ್ರಾಸ್ ಆಸ್ಪತ್ರೆ ಕಾಮಗೆರೆಗೆ ಅಲ್ಲಿ ಸೇರಿದ್ದ ಜನರು ಕರೆದುಕೊಂಡು ಹೋಗಿರುತ್ತಾರೆ. ನಂತರ ಮೈಸೂರಿನ ಅಪೊಲೋ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ವೈದ್ಯರಿಗೆ ಅಪಘಾತ ಹೇಗಾಯಿತು ಎಂದು ಹೇಳಿದ್ದೇನೆ. ನಾನು ಪ್ರಮಾಣಪತ್ರದಲ್ಲಿ ಮೊದಲು ಹೋಲಿಕ್ರಾಸ್ ಆಸ್ಪತ್ರೆಗೆ ಹೋಗಿ ನಂತರ ಅಪೊಲೋ ಆಸ್ಪತ್ರೆಗೆ ಹೋಗಿದ್ದೆ ಎಂದು ಬರೆಸಿಲ್ಲ ಎಂದರೆ ಸರಿ. ಹೋಲಿಕ್ರಾಸ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವುದಿಲ್ಲ. ನಾನು ಅಪೊಲೋ ಆಸ್ಪತ್ರೆಯಲ್ಲಿ 17 ದಿನ ಒಳರೋಗಿಯಾಗಿ ದಾಖಲಾಗಿದ್ದೆ. ನಾನೀಗ ಸಂಪೂರ್ಣವಾಗಿ ಗುಣಮುಖನಾಗಿದ್ದೇನೆ ಎಂದರೆ ಸರಿಯಲ್ಲ. ನಾನೀಗ ಭಾರವಾದ ವಸ್ತುಗಳನ್ನು ಎತ್ತಲಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ನನಗೆ ಅಪಘಾತದ ದಿನ ಬೆನ್ನಿಗೆ ಮತ್ತು ಬಲಗೈಗೆ ಪೆಟ್ಟಾಗಿರುತ್ತದೆ. ನಾನೇ ಸ್ಕೂಟರ್ ನಿಂದ ಬಿದ್ದು ಪೆಟ್ಟಾಗಿದ್ದರೂ ನನಗೆ ಕಾರು ಬಂದು ಡಿಕ್ಕಿ ಹೊಡೆದು ಅಪಘತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. SCSIO INDIA PRIVATE LIMITED, BANGALOREನಲ್ಲಿ ಆಫೀಸ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದ ಬಗ್ಗೆ ತಿಂಗಳಿಗೆ ರೂ. 40,000/– ಸಂಪಾದನೆ ಮಾಡುತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನಗೆ ಸಂಬಳವನ್ನ ಎಸ್ ಬಿ ಐ ಉಳಿತಾಯ ಖಾತೆಗೆ ಹಾಕುತ್ತಿದ್ದರು. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು

ಆಗುವುದಿಲ್ಲ. ನಾನು ಈಗ ಊರಿನಲ್ಲಿ ವ್ಯವಸಾಯ ಮಾಡುತ್ತಿದ್ದೇನೆ. ಈ ಅಪಘಾತದಿಂದ ನನಗೆ ಯಾವುದೇ ಆದಾಯ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,
ಓ ಹೇ ಕೇ ಸರಿ ಇದೆ,

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.